ಸೇಡಂ ಕ್ಷೇತ್ರದ ರೈತರು ತೊಗರಿಬೆಳೆಗೆ ಸಿಂಪಡಿಸಿದ ಕ್ರಿಮಿನಾಶಕ ಔಷಧಿಗಳಲ್ಲಿ ಕಲಬೆರಕೆ

286. ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ):– ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ಕ್ಷೇತ್ರದ ರೈತರು ಈ ವರ್ಷ ತೊಗರಿ ಬೆಳೆಗೆ ಕ್ರಿಮಿನಾಶಕ ಔಷಧಿಗಳನ್ನು ಸಿಂಪಡಿಸುವ ಅರ್ಧ ಅವಧಿಗಿಂತಲೂ ಹೆಚ್ಚು ಸಿಂಪರಣೆ ಮಾಡಿದ ನಂತರ ಕೃಷಿ ಇಲಾಖೆಯವರು ಕೆಲವು ಕಂಪನಿಗಳ ಕ್ರಿಮಿನಾಶಕಗಳು ಕಳಪೆ ದರ್ಜೆಯವು ಇವೆ ಎಂದು ಅವುಗಳನ್ನು ಉಪಯೋಗಿಸಬಾರದೆಂದು ಪ್ರಚಾರ ಮಾಡಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಈ ಪ್ರಕಾರ ಕ್ರಿಮಿನಾಶಕಗಳು ಅರ್ಧ ಅವಧಿಗೆ ಸಿಂಪರಣೆ ಮಾಡಿದ್ದರಿಂದ ಉಂಟಾದ ನಷ್ಟಕ್ಕೆ ಕೃಷಿ ಇಲಾಖೆಯವರು ಜವಾಬ್ದಾರರಲ್ಲವೇ ?

ಇ) ಸೇಡಂ ಕ್ಷೇತ್ರದಲ್ಲಿ ಸುಮಾರು ನಾಲ್ಕು ಕೋಟಿ ರೂಪಾಯಿ ಕ್ರಿಮಿನಾಶಕಗಳನ್ನು ಬಳಸಿದ ರೈತರ ನಷ್ಟವನ್ನು ಭರಿಸುವವರು ಯಾರು ?

ಈ) ಪ್ರಾರಂಭದಿಂದಲೇ ಕಳಪೆ ದರ್ಜೆಯ ಕ್ರಿಮಿನಾಶಕಗಳನ್ನು ಉಪಯೋಗಿಸಿದ್ದಕ್ಕಾಗಿ ಕಾಯಿ ಕೊರೆಯುವ ಹುಳುಗಳು ಹತೋಟಿಗೆ ಬರದೇ ಕೋಟ್ಯಾನುಗಟ್ಟಲೇ ನಷ್ಟವಾಗಿರುವುದು ನಿಜವೇ ?

ಉ) ಈ ನಷ್ಟ ಪರಿಹಾರವನ್ನು ರೈತರಿಗೆ ಸರ್ಕಾರ ಕೊಡುವ ವ್ಯವಸ್ಥೆ ಯಾವಾಗ ಮಾಡಲಾಗುವುದು ?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು):–

ಅ) ಬಂದಿದೆ.

ಆ) ಇಲ್ಲ .

ಇ) ಸೇಡಂ ತಾಲ್ಲೂಕಿನಲ್ಲಿ ಸುಮಾರು 2.69 ಕೋಟಿ ರೂಪಾಯಿಗಳಷ್ಟು ಕ್ರಿಮಿನಾಶಕಗಳನ್ನು ರೈತರು ಬಳಸಿದ್ದಾರೆ. ತೊಗರಿ ಬೆಳೆಗೆ ಹಾನಿಕಾರಕ ಕಾಯಿಕೊರಕ ಹುಳುವಿನ ಕಾಟವು ಹವಾಮಾನ ವೈಪರೀತ್ಯದಿಂದ ಹೆಚ್ಚಾಗಿ ನಷ್ಟವಾಗಿದೆ.

ಈ) ಈ ವರ್ಷ ಕಡಿಮೆ ದರ್ಜೆಯ ಕೀಟನಾಶಕಗಳ ಉಪಯೋಗಕ್ಕಿಂತ ಹವಾಮಾನ ವೈಪರೀತ್ಯದಿಂದಲೇ ಹೆಚ್ಚು ನಷ್ಟವಾಗಿದೆ.

ಉ) ಬೆಳೆ ವಿಮಾ ಯೋಜನೆಯಲ್ಲಿ ಸಾಲ ತೆಗೆದುಕೊಂಡಿರುವ ರೈತರಿಗೆ ಪರಿಹಾರ ದೊರಕುತ್ತದೆ. ಹಾಗೂ ವ್ಯವಸಾಯ ಇಲಾಖಾ ವತಿಯಿಂದ ವಿವಿಧ ಯೋಜನೆಗಳಡಿಯಲ್ಲಿ ರೈತರಿಗೆ ರಿಯಾಯಿತಿ ದರದಲ್ಲಿ ಕೀಟನಾಶಕಗಳನ್ನು ಮತ್ತು ಸಸ್ಯ ಸಂರಕ್ಷಣಾ ಉಪಕರಣಗಳನ್ನು ಒದಗಿಸಲಾಗುತ್ತಿದೆ.

ಶ್ರೀ ಬಸವಂತ ರೆಡ್ಡಿ ಮೋತಕಪಲ್ಲಿ :- ಸನ್ಮಾನ್ಯ ಸಭಾಧ್ಯಕ್ಷಣಿಯವರೆ ನನ್ನ 'ಅ' ಪ್ರಶ್ನೆಗೆ 'ಇಲ್ಲ' ಎಂದು ಉತ್ತರ ಕೊಟ್ಟಿದ್ದಾರೆ. ಈ ನಕಲಿ ಕ್ರಿಮಿನಾಶಕಗಳಿಂದ ತೊಗರಿಬೆಳೆ ನಾಶವಾಗದಿದ್ದರೆ, ಯಾವ ಕಾರಣಗಳಿಂದ ತೊಗರಿಬೆಳೆ ನಾಶವಾಗಿದೆ, ಇದಕ್ಕೆ ಕಾರಣಗಳು ಏನು ಎನ್ನುವುದನ್ನು ಮಾನ್ಯ ಕೃಷಿ ಮಂತ್ರಿಗಳು ತಿಳಿಸುತ್ತಾರೆಯೆ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ :– ತೊಗರಿಬೆಳೆ ಹಾಕಬೇಕಾದಂಥ ಕಾಲ ಈ ವರ್ಷ ಮಿಂಚಿ ಹೋಗಿದೆ. ಮಳೆಗಾಲ, ಹಿಂಗಾರು ಮಳೆ ಆರಂಭವಾಗಿ 15–20 ದಿವಸ ಸುಮಾರು ಒಂದು ತಿಂಗಳು ನಿಧಾನವಾದುದರಿಂದ ಬೆಳೆ ಇಡುವುದು ನಿಧಾನವಾಗಿದೆ. ಈ ಮಧ್ಯೆ ನವೆಂಬರ್‌ವರೆಗೆ ಮಳೆಬಾರದೆ ಹೆಚ್ಚು ಬೆಳೆಯನ್ನು ಬೆಳೆಯಲು ಅವಕಾಶವಾಗಲಿಲ್ಲ. ನವೆಂಬರ್ 17ರಿಂದ 20ರಲ್ಲಿ 3–4 ದಿವಸಗಳು ಒಂದೇ ಸಮನೆ ಮಳೆ ಬಂದಿದ್ದರಿಂದ ಹುಳು ಶುರುವಾಗಿ ತೊಗರಿಬೆಳೆಗೆ ನಾಶವಾಗುವಂತಹ ಪರಿಸ್ಥಿತಿ ಬಂದಿತ್ತು. ರೈತರು ಅವರಿಗೆ ಸಿಕ್ಕಿದ ಔಷಧಿಗಳನ್ನು ಉಪಯೋಗಿಸಿದರು. ಈ ಸಂದರ್ಭದಲ್ಲಿ ಯಾವುದು ಸರಿ ಯಾವುದು ಸರಿ ಅಲ್ಲ ಎಂಬುದರ ಬಗ್ಗೆ ವಿವೇಚನೆ ಇಲ್ಲದೆ ಔಷಧಿಗಳನ್ನು ಉಪಯೋಗಿಸಿದರು. ಇದರಿಂದ ಉಪಯೋಗ ಆಗಲಿಲ್ಲ. ಮತ್ತೆ 17–18–19 ನವೆಂಬರ್‌ನಲ್ಲಿ ಮಳೆ ಬಂದಿದ್ದರಿಂದ ಹವಾಮಾನ ಈ ಹುಳುಗಳಿಗೆ ಸಹಾಯಕವಾಗಿ ಅವು ಇನ್ನು ಹೆಚ್ಚು ಬೆಳೆದು ಬಹು ಬೇಗ ಬೆಳೆದಂತೆ ಗಿಡಗಳನ್ನು ಆಕ್ರಮಿಸಿ ಕಾಯಿಗಳನ್ನು ತಿನ್ನತಕ್ಕ ಪರಿಸ್ಥಿತಿ ಬಂತು. ಆಗ ರೈತರು ಎಚ್ಚರಗೊಂಡು ಇಲಾಖೆ ಅಧಿಕಾರಿಗಳ ಸಲಹೆಯನ್ನು ಪಡೆದು ಔಷಧಿಗಳನ್ನು ಉಪಯೋಗ ಮಾಡಲು ಪ್ರಾರಂಭ ಮಾಡಿದರೂ, ಸರಿಯಾದ ಔಷಧಿಗಳು ದೊರಕದೆ ಅಥವಾ ಔಷಧಿಗಳನ್ನು ಮಾರತಕ್ಕವರು ಕಳಪೆ ಔಷಧಿಗಳನ್ನು ಮಾರಾಟ ಮಾಡಿದ್ದರಿಂದ ಹಾಗೂ ಅವುಗಳನ್ನು ಉಪಯೋಗಿಸಿದ್ದರಿಂದ ಈ ಹುಳುಗಳ ಕಾಟವನ್ನು ತಪ್ಪಿಸಲು ಸಾಧ್ಯವಾಗಲಿಲ್ಲ. ಆಮೇಲೆ ಡಿಸೆಂಬರ್‌ನಲ್ಲಿ ಯಾವ ಔಷಧಗಳನ್ನು ಒದಗಿಸಬೇಕಾಗಿತ್ತೊ ಆ ಔಷಧಿಗಳು ಸಿಕ್ಕದೇ ತೊಂದರೆ ಆದ್ದರಿಂದ ಹುಳುಗಳ ಕಾಟ ಬಹಳ ಜಾಸ್ತಿಯಾಯಿತು ಇದರಿಂದ ಏನು ಮಾಡಬೇಕು ಎನ್ನತಕ್ಕ ಪರಿಸ್ಥಿತಿ ಬಂದಿತ್ತು.

ಶ್ರೀ ಬಾಬುರಾವ್ ಚವಾಣ್ :– ಕಳಪೆ ದರ್ಜೆಯ ಔಷಧಿಗಳನ್ನು ತಯಾರು ಮಾಡಿದ ಸಂಸ್ಥೆಗಳ ಹೆಸರುಗಳನ್ನು ತಿಳಿಸಬೇಕು.

ಶ್ರೀ ಎನ್. ಹುಚ್ಚಮಾಸ್ತಿ ಗೌಡ:– ಡಿಸೆಂಬರ್ 5ನೇ ತಾರೀಖು ಈ ವಿಷಯದ ಬಗ್ಗೆ ಪೂರ್ಣ ಮಾಹಿತಿಯನ್ನು ನಾನು ತರಿಸಿಕೊಂಡೆ. ನಾನೇ ಖುದ್ದಾಗಿ ಅಲ್ಲಿಗೆ ಹೋಗಿದ್ದೇನೆ. ಧಾರವಾಡದ ವ್ಯವಸಾಯ ಕಾಲೇಜಿನ ಪರಿಣಿತರನ್ನು ಕಳುಹಿಸಿ, ಅವರು ಈ ಔಷಧಿಗಳನ್ನು ಉಪಯೋಗಿಸಿರುವುದು ಉಪಯೋಗ ಆಗಿದೆಯೇ ಇಲ್ಲವೆ, ಬೇರೆ ಔಷಧಿಗಳನ್ನು ಉಪಯೋಗಿಸಬೇಕೇ ಎಂಬುದರ ಬಗ್ಗೆ ಸಲಹೆಯನ್ನು ಕೊಟ್ಟರು, ಯಾರ್ಯಾರು ಸರಿಯಾದ ಔಷಧಿಗಳನ್ನು ಕೊಡದೇ ಮೋಸ ಮಾಡಿದ್ದಾರೆ. ಅಂತಹ 28 ಜನರ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಬಾಬುರಾವ್ ಚವಾಣ್:– ಈ ಕಳಪೆ ದರ್ಜೆ ಔಷಧಿಗಳನ್ನು ತಯಾರು ಮಾಡತಕ್ಕ ಕಂಪನಿಗಳು ಎಷ್ಟು ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಅವರ ಮೇಲೆ ಏನು ಕ್ರಮವನ್ನು ಸರ್ಕಾರ ತೆಗೆದುಕೊಂಡಿದೆ ? ಈ ಕಳಪೆ ದರ್ಜೆಯ ಔಷಧಿಗಳಿಂದ ಹುಳುಗಳು ಸಾಯುತ್ತಿಲ್ಲ, ಇದರಿಂದ ರೈತರು ಕಂಗಾಲಾಗಿದ್ದಾರೆ. ಇಂತಹ ಕಂಪನಿಗಳ ಹೆಸರುಗಳನ್ನು ದಯವಿಟ್ಟು ಮಾನ್ಯ ಮಂತ್ರಿಗಳು ತಿಳಿಸಬೇಕು ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ:– ಇವುಗಳಿಗೆ ಲೈಸನ್ಸ್ ಕೊಡತಕ್ಕ ಕಾನೂನು ಕೇಂದ್ರ ಸರ್ಕಾರದ ಕೈಯಲ್ಲಿದೆ. ಈ ಔಷಧಿಗಳನ್ನು ಮಾರಾಟ ಮಾಡುವವರು ಯಾರು ತಪ್ಪು ಮಾಡಿದ್ದಾರೆ, ಯಾರು ಕಳಪೆ ದರ್ಜೆಯ ಔಷಧಿಗಳನ್ನು ಮಾರಿದ್ದಾರೆ ಎಂದು ಗೊತ್ತಾದ ಕೂಡಲೇ ಈ ರೀತಿ 28 ಜನ ಔಷಧಿ ಮಾರಾಟ ಮಾಡುವವರ ಮೇಲೆ ನಾವು ಕ್ರಮವನ್ನು ತೆಗೆದುಕೊಂಡಿದ್ದೇವೆ.

ಶ್ರೀ ಬಾಬುರಾವ್ ಚವಾಣ್:– ಮಾರಾಟ ಮಾಡುವವರ ಮೇಲೆ ಕ್ರಮ ತೆಗೆದುಕೊಂಡರೆ ಏನೂ ಪ್ರಯೋಜನವಿಲ್ಲ. ಕಂಪನಿಯವರು ಮಾರಿ ಎಂದು ಹೇಳುತ್ತಾರೆ ಅವರು ಮಾರುತ್ತಾರೆ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ:– ಮಾನ್ಯ ಸಭಾದ್ಯಕ್ಷಿಣಿಯವರೆ, ಮಾನ್ಯ ಸಚಿವರು ಬಿತ್ತನೆಯನ್ನು ನಿಧಾನವಾಗಿ ಮಾಡಿದ್ದಾರೆಂದು ಹೇಳಿದರು. ಪ್ರತಿವರ್ಷವೂ ವೇಳೆಯಾಗಿ ರೈತರು ಬಿತ್ತನೆ ಮಾಡುತ್ತಿದ್ದರು. ಈ ವರ್ಷ ಕೂಡ ಸ್ವಲ್ಪ ಹೆಚ್ಚು ಕಡಿಮೆ ಬಿತ್ತನೆ ಮಾಡಿದ್ದಾರೆ. ಈ ವರ್ಷ ಹವಾಮಾನದಿಂದ ಅಂದರೆ ಸುಮಾರು 10–15 ದಿವಸ ಕವಿದ ಮೋಡಗಳಿಂದ ಕಾಯಿ ಹುಳು ಹೆಚ್ಚಾಗಿದೆ. ಈ ವರ್ಷ ಸಹಾ ಪ್ರತಿ ಎರಡು ದಿವಸಕ್ಕೆ ಕ್ರಿಮಿನಾಶಕ್ಕೆ ಸಿಂಪರಣೆ ಮಾಡಿದ್ದರೂ ಕೂಡ ಪರಿಣಾಮಕಾರಿ ಆಗಿಲ್ಲ ಎಂದರೆ ಅವು ನಕಲಿ ಔಷಧಿಗಳಿಂದ ಅಲ್ಲವೆ. ಸಿಂಪರಣೆ ನಂತರ ಕೆಲವು ಕಂಪನಿಗಳವರು ಕಳಪೆ ದರ್ಜೆಯ ಕ್ರಿಮಿನಾಶಕಗಳು ಎಂದು ಪ್ರಚಾರ ಮಾಡಿದರು. ಇಂತಹ ಕಳಪೆ ದರ್ಜೆ ಕ್ರಿಮಿನಾಶಕಗಳನ್ನು ಉಪಯೋಗಿಸಬಾರದೆಂದು ಮೊದಲೇ ಪ್ರಚಾರ ಮಾಡಿದ್ದರೆ, ರೈತರು ಉತ್ತಮ ದರ್ಜೆಯ ಔಷಧಿಗಳನ್ನು ಸಿಂಪಡಿಸಿ ತೊಗರಿಬೆಳೆಯನ್ನು ಕಾಪಾಡುವುದರಲ್ಲಿ ಸಫಲರಾಗುತ್ತಿದ್ದರು. ಇದರ ಬಗ್ಗೆ ಮಂತ್ರಿಗಳು ಉತ್ತರ ಕೊಡಬೇಕು.

ಶ್ರೀ ಎನ್. ಹುಚ್ಚಮಾಸ್ತಿ ಗೌಡ:– ಪರಿಣಿತರು ಅಲ್ಲಿ ಸ್ಥಳದಲ್ಲಿ ಹೋಗಿ ನೋಡಿ ಈಗ ಉಪಯೋಗಿಸಿದಂತಹ ಔಷಧಿ ಕಳಪೆ ದರ್ಜೆಯದೆಂದು ಗೊತ್ತಾದ ಮೇಲೆ ಅವರು ಸಲಹೆಗಳನ್ನು ಕೊಟ್ಟಿದ್ದಾರೆ. ಆ ಸಲಹೆಗಳನ್ನು ಕೊಟ್ಟ ಮೇಲೆ ಸಕಾಲದಲ್ಲಿ ಔಷಧಿಗಳನ್ನು ಉಪಯೋಗಿಸದೆ ಇರುವುದಕ್ಕೆ ಕಾರಣ ಏನು ಎನ್ನುವುದನ್ನು ನಾನು ಆಗಲೇ ಹೇಳಿದೆ, ನವೆಂಬರ್ 17,18,19 ರಲ್ಲಿ ಮಳೆ ಬಂದು ಮೋಡ ಜಾಸ್ತಿಯಾದುದರಿಂದಲೇ ಹುಳುಗಳ ಶಕ್ತಿ ಜಾಸ್ತಿಯಾಗುತ್ತದೆ ಎನ್ನುವುದು ಪರಿಣಿತರ ಅಭಿಪ್ರಾಯ. ಆ ರೀತಿ ಜಾಸ್ತಿಯಾದ ಮೇಲೆ ಎಷ್ಟೋ ರೈತರು 8 ಸಾರಿ 10 ಸಾರಿ ಔಷಧಿಗಳನ್ನು ಹೊಡೆದಿದ್ದಾರೆ. ಆ ಔಷಧಿ ಹೊಡೆದರೂ ಏನೂ ಉಪಯೋಗ ಆಗಲಿಲ್ಲ. ನಮ್ಮ ಅಗ್ರಿಕಲ್ಚರ್ ಕಾಲೇಜಿನ ಪರಿಣಿತರು ಬಂದು, ನಮ್ಮ ಇಲಾಖೆ ಪರಿಣಿತರು ಸೇರಿ ಆ ಔಷಧಿಗಳನ್ನು ಉಪಯೋಗಿಸುವುದು ಸರಿಯಲ್ಲವೆಂದೂ, ಇಂತಿಂಥ ಔಷಧಿಗಳನ್ನು ಉಪಯೋಗಿಸಬೇಕು ಎಂದೂ ಸಲಹೆ ಕೊಟ್ಟ ಮೇಲೆ ಸ್ವಲ್ಪ ಹತೋಟಿಗೆ ಬಂತು ಅಷ್ಟೆ. ನಮ್ಮ ವಿಶ್ವವಿದ್ಯಾನಿಲಯದ ಪರಿಣಿತರು ಕೂಡ ಅನೇಕ ಊರುಗಳಿಗೆ ಹೋಗಿ ಈ ಬೆಳೆಗಳನ್ನು ನೋಡಿ, ಅಲ್ಲಿ ಆಗಿರತಕ್ಕಂಥ ಪರಿಸ್ಥಿತಿಯನ್ನು ನೋಡಿ ಸಲಹೆಗಳನ್ನು ಮಾಡಿದ ಮೇಲೆ ಸ್ವಲ್ಪ ಹತೋಟಿಗೆ ಬಂದಿದೆ. ಈಗಲೂ ಅಲ್ಪ ಸ್ವಲ್ಪ ಉಳಿದ ಬೆಳೆಯೂ ಉಳಿಯುವಂಥ ಪರಿಸ್ಥಿತಿಗೆ ಬಂದಿದೆ.

ಶ್ರೀ ಬಾಬುರಾವ್ ಚವಾಣ್:– ಕಳಪೆ ದರ್ಜೆಯ ಔಷಧಿಗಳನ್ನು, ಸರಬರಾಜು ಮಾಡಿದ ಕಂಪನಿಗಳು ಎಷ್ಟು ಎಂದು ಮಾನ್ಯ ಸಚಿವರು ಹೇಳಲಿಲ್ಲ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ:– ಗುಲ್ಬರ್ಗದಲ್ಲಿ ರೈತರು ಬಹಳ ಕಂಗಾಲಾಗಿದ್ದಾರೆ. ಸರ್ಕಾರ ಏನಾದರೂ ಪರಿಹಾರ ಧನ ಕೊಡುತ್ತದೆಯೆ ಎಂದು ಕೇಳುತ್ತೇನೆ.

(ಗೊಂದಲ)

ಶ್ರೀ ಎನ್. ಹುಚ್ಚಮಾಸ್ತಿಗೌಡ:– ಈ ರೀತಿ 3–4ಜನ ಸರಿಯಾಗಿ ಕೇಳುತ್ತ ಹೋದರೆ ಯಾವುದಕ್ಕೆ ಉತ್ತರ ಕೊಡಬೇಕು.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ:– ಮಾನ್ಯ ಅಧ್ಯಕ್ಷಿಣಿಯವರೇ, ವ್ಯವಸಾಯ ಇಲಾಖಾ ವತಿಯಿಂದ ವಿವಿಧ ಯೋಜನೆಗಳಲ್ಲಿ ರೈತರಿಗೆ ರಿಯಾಯಿತಿ ದರದಲ್ಲಿ ಕೀಟನಾಶಕಗಳನ್ನು ಮತ್ತು ಸಸ್ಯ ಸಂರಕ್ಷಣಾ ಉಪಕರಣಗಳನ್ನು ಒದಗಿಸಲಾಗುತ್ತಿದೆ ಎಂದು ಮಾನ್ಯ ಮಂತ್ರಿಗಳು ಉತ್ತರದಲ್ಲಿ ತಿಳಿಸಿದ್ದಾರೆ. ಆದರೆ ಈಗ ಈ ಪರಿಸ್ಥಿತಿಯಲ್ಲಿ ರೈತರಿಗೆ ಯಾವ ಬೆಳೆಗಾಗಿ ಈ ಕ್ರಿಮಿನಾಶಕ ಔಷಧಿಗಳನ್ನು ಸರಬರಾಜು ಮಾಡುತ್ತಿದ್ದಾರೆ. ಅಲ್ಲದೆ ಈಗ ನಮ್ಮ ರೈತರು ಈ ವಾಡಿಕೆ ಬೆಳೆಯಾದ ತೊಗರಿಬೆಳೆಗಾಗಿ

ಎಲ್ಲ ಹಣವನ್ನು ಸುರಿದು ಈಗ ಹಣ ಇಲ್ಲದೆ ರೈತರು ಕಂಗಾಲಾಗಿ ನಷ್ಟದಲ್ಲಿದ್ದಾರೆ. ಪ್ರತಿ ವರ್ಷ ಇದೇ ಪ್ರಕಾರ ನಮ್ಮ ಭಾಗದಲ್ಲಿ ಅತಿವೃಷ್ಟಿಯಿಂದಲೂ ಮತ್ತು ಅನಾವೃಷ್ಟಿಯಿಂದಲೂ ಮತ್ತು ನೈಸರ್ಗಿಕ ವಿಕೋಪದಿಂದಲೂ ನಷ್ಟ ಹೊಂದುತ್ತಿದ್ದಾರೆ. ಅವರು ಸಾಲ ಮರುಪಾವತಿ ಮಾಡುವ ಪರಿಸ್ಥಿತಿಯಲ್ಲಿಯೇ ಇಲ್ಲ. ಅದಕ್ಕಾಗಿ ಸರ್ಕಾರ ಏನಾದರೂ ಪರಿಹಾರ ಧನ ನೀಡಬಹುದೇ ಅಥವಾ ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡಬಾರದೇಕೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ:– ಈಗ ಬೆಳೆ ನಷ್ಟ ಆಗಿರುವುದಕ್ಕೆ ಪರಿಹಾರ ಕೊಡುವುದಕ್ಕೆ ಆಗುವುದಿಲ್ಲ. ಏಕೆಂದರೆ ಲಕ್ಷಾಂತರ ಎಕರೆಯಲ್ಲಿ ರೈತರು ಸರಿಯಾದ ಔಷಧಿಗಳನ್ನು ಉಪಯೋಗಿಸದೆ ನಷ್ಟವಾಗಿರುವಾಗ ಸರ್ಕಾರ ಅದಕ್ಕೆ ಹೇಗೆ ಜವಾಬ್ದಾರಿ ವಹಿಸಿಕೊಳ್ಳುವುದಕ್ಕಾಗುತ್ತದೆ. ಸರ್ಕಾರವೇ ಸ್ಪಷ್ಟವಾಗಿ ಇಂತಿಂಥ ಔಷಧಿಗಳನ್ನು ಉಪಯೋಗಿಸಬೇಕೆಂದು ನಮ್ಮ ಪರಿಣಿತರು ತಿಳಿಸಿದರೂ ಕೂಡ ಅವರಿಗೆ ಇಷ್ಟ ಬಂದ ಔಷಧಿಗಳನ್ನು ಉಪಯೋಗಿಸಿದ್ದಾರೆ ಎನ್ನುವುದು ಸ್ಪಷ್ಟವಾಗಿ ಸ್ಥಳದಲ್ಲಿಯೇ ಗೊತ್ತಾಗುತ್ತದೆ. ನಾನು ಗುಲ್ಬರ್ಗ ಜಲ್ಲೆಯ ಕೆಲವು ಪ್ರದೇಶಗಳಿಗೆ ಡಿಸೆಂಬರ್ 5ನೇ ತಾರೀಖು ಹೋಗಿ ಬಂದೆ. ವ್ಯವಸಾಯ ಕಾಲೇಜಿನ ಪರಿಣಿತರು ನಮ್ಮ ಜೊತೆಯಲ್ಲಿ ಬಂದಿದ್ದರು. ನಮ್ಮ ಇಲಾಖೆಯ ಪರಿಣಿತರು ಕೂಡ ನನ್ನ ಜೊತೆ ಬಂದಾಗ ಇವರು ಸರಿಯಾಗಿ ಔಷಧಿಗಳನ್ನು ಉಪಯೋಗಿಸಿಲ್ಲ ಎನ್ನುವುದರ ಜೊತೆಗೆ ಸರಿಯಾದ ಔಷಧಿಗಳನ್ನು ಮಾರುತ್ತಾ ಇಲ್ಲ, ಮೋಸ ಮಾಡುತ್ತಿದ್ದಾರೆಂದು ತಿಳಿದು ಬಂತು. ಆಗ 28 ಜನ ಔಷಧಿ ಮಾರಾತಕ್ಕವರ ಮೇಲೆ ಕ್ರಮವನ್ನು ತೆಗೆದುಕೊಂಡಿದ್ದೇವೆ. ಮಾನ್ಯ ಸದಸ್ಯರು ಹೇಳಿದಂತೆ ಪರಿಹಾರ ಯಾವ ರೀತಿ ಕೊಡಬಹುದೆಂದರೆ ಅವರು ಉಪಯೋಗಿಸತಕ್ಕಂಥ ಯಂತ್ರಗಳನ್ನಾಗಲೀ ಅಥವಾ ಇತರೆ ಸಲಕರಣೆಗಳನ್ನಾಗಲೀ ನಾವು ಕೊಡಬಹುದೇ ಹೊರತು, ಬೆಳೆಗೆ ಸ್ಪಷ್ಟವಾದ ಪರಿಹಾರ ಕೊಡುವುದಕ್ಕಾಗುವುದಿಲ್ಲ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:– ಮಾನ್ಯ ಉಪಾಧ್ಯಕ್ಷಿಣಿಯವರೇ, ಸನ್ಮಾನ್ಯ ಕೃಷಿ ಮಂತ್ರಿಗಳು ಈಗ ಕೊಟ್ಟಂಥ ಉತ್ತರದಲ್ಲಿ ಮೊದಲು ಒಂದು ಮಾತನ್ನು ಹೇಳಿದರು, ರೈತರು ಸರಿಯಾದ ಕೀಟ ನಾಶಕಗಳನ್ನು ಉಪಯೋಗಿಸುತ್ತಿಲ್ಲ ಎಂದು. ಅನಂತರ ಹೇಳಿದರು ಸರಿಯಾದ ಕೀಟ ನಾಶಕ ಮಾರಾಟವಾಗುತ್ತಿಲ್ಲ ಎಂದು. ಆನಂತರ ಅವರು ಕೊಟ್ಟಿರತಕ್ಕ ಉತ್ತರ ನೋಡಿದರೆ, ಹವಾಮಾನದ ಮೇಲೆ ಆರೋಪ ಮಾಡುತ್ತಿದ್ದಾರೆ, ಆದರೆ ನಿಜವಾಗಿಯೂ ಕಳಪೆ ಮತ್ತು ಕಲಬೆರಕೆಯ ಕೀಟ ನಾಶಕಗಳ ಹಾವಳಿಯಿಂದ ನಷ್ಟವಾಗಿರುವುದು ರೈತರಿಗೆ.

ತಮಗೆ, ಹೊಳೆಯುತ್ತದೆ ನಾವು ಹಾಲು ಸರಬರಾಜು ಮಾಡಿದಾಗ ಅದರಲ್ಲಿ ಕೊಬ್ಬಿನ ಪ್ರಮಾಣ ಎಷ್ಟಿದೆ ಎಂಬುದನ್ನು ಪರೀಕ್ಷೆ ಮಾಡುವುದಕ್ಕೆ ಯಂತ್ರಗಳನ್ನು ರಾಜ್ಯದ ತುಂಬ ತಾವು ಕೊಟ್ಟಿದ್ದೀರಿ. ಕಲಬೆರಕೆಯ ಔಷಧಿಗಳನ್ನು ಪತ್ತೆ ಮಾಡುವುದಕ್ಕೆ, ಕೆಮಿಕಲ್ ಅನಾಲಿಸಿಸ್ ಮಾಡುವುದಕ್ಕೆ ಪ್ರತಿ ತಾಲೂಕಿನಲ್ಲೂ ಏನಾದರೂ ವ್ಯವಸ್ಥೆ ಮಾಡಿದ್ದೀರಾ ? ಇದು ಬಹಳ ಮುಖ್ಯವಾದ ಪ್ರಶ್ನೆ, ಆದಕಾರಣ ನಾನು ಕೇಳುತ್ತಿದ್ದೇನೆ. ನೀವು ಸಮಸ್ಯೆಯಿಂದ ತಪ್ಪಿಸಿಕೊಳ್ಳಲು ಪ್ರಯತ್ನ ಮಾಡುತ್ತಿದ್ದೀರಿ. ಇಂದ್ರನನ್ನೂ ದೇವೆಂದ್ರನನ್ನೂ ನೀವು ಆರೋಪ ಮಾಡುತ್ತಿದ್ದೀರಿ. ಇಲ್ಲಿ ಕೀಟನಾಶಕ ಉತ್ಪಾದಕರು, ಕಲಬೆರಕೆ ಕೀಟನಾಶಕಗಳನ್ನು ಉತ್ಪಾದನೆ ಮಾಡುತ್ತಿದ್ದಾರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ನಿಮ್ಮ ಸರ್ಕಾರದಲ್ಲಿ ಒಂದು ಕಾನೂನನ್ನೂ ಮಾಡಿಲ್ಲ. ಅವರ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ತೆಗೆದುಕೊಂಡಿದ್ದೇವೆ ಎಂದು ಹೇಳುತ್ತೀದ್ದೀರಿ, ಅಷ್ಟು ಸಾಲದು, ಕಾನೂನು ಚೌಕಟ್ಟಿನಲ್ಲಿ ಅವರ ತಪ್ಪಿನಿಂದಾಗಿ, ಅವರ ಮೋಸದಿಂದಾಗಿ ರೈತರಿಗೆ ಏನು ನಷ್ಟವಾಗಿದೆ ಅದಕ್ಕೆ ತಕ್ಕ ಪರಿಹಾರವನ್ನು ರೈತರಿಗೆ ಕೊಡತಕ್ಕ ವ್ಯವಸ್ಥೆ ಮಾಡತಕ್ಕದ್ದು ನಿಮ್ಮ ಕರ್ತವ್ಯ. ನಿಮ್ಮ ಕೈಯಿಂದ ಪರಿಹಾರ ಕೊಡತಕ್ಕ ಚೈತನ್ಯ ನಿಮಗಿಲ್ಲ. ಆದರೆ ಯಾವ ಕಂಪೆನಿಗಳು ಈ ಕಲಬೆರಕೆ ಕೀಟ ನಾಶಕಗಳನ್ನು ಮಾರುತ್ತವೆ.

ಅವು ರೈತರಿಗೆ ಪರಿಹಾರ ಕೊಡುವ ರೀತಿ ತಾವು ಕಾನೂನು ಮಾಡಬೇಕು. ಆ ಕೆಲಸ ಮಾಡುತ್ತೀರಾ ಅಂತ ನಾನು ತಮ್ಮನ್ನು ಕೇಳುತ್ತೇನೆ.

ಶ್ರೀ ಎಂ. ನಾರಾಯಣ ಸ್ವಾಮಿ:– ಮಾನ್ಯ ಸಚಿವರು ತೊಗರಿಬೆಳೆ ಇರಬಹುದು, ಅಥವಾ ಅವರೆ ಬೆಳೆ ಇರಬಹುದು ಅಥವಾ ಬೇರೆ ಬೆಳೆ ಇರಬಹುದು....

ಉಪಾಧ್ಯಕ್ಷಿಣಿಯವರು:– ಹೀಗೆ ಒಂದೊಂದು ಪ್ರಶ್ನೆಗೆ ಹತ್ತತ್ತು ನಿಮಿಷ ತೆಗೆದುಕೊಂಡರೆ ಕೊನೆಯ ಹತ್ತು ಪ್ರಶ್ನೆಗಳಿಗೆ ಅವಕಾಶ ಇಲ್ಲ ಅಂದರೆ ಅವು ಲ್ಯಾಪ್ಸ್ ಆಗುತ್ತವೆ. ನೀವು ಸಹಕಾರ ನೀಡಿದರೆ ಸರಿ. ಇದು ಇಡೀ ರಾಜ್ಯದ ಪ್ರಶ್ನೆ ಆಗಿದೆ. ತಾವು ಇದನ್ನೇ ಬೇರೆ ರೂಪದಲ್ಲಿ ಕಳಿಸಿಕೊಡಿ. ಅದರ ಬಗ್ಗೆ ಚರ್ಚೆಗೆ ಅವಕಾಶ ಕೊಡೋಣ.

ಶ್ರೀ ಎಂ. ನಾರಾಯಣ ಸ್ವಾಮಿ:– ಮಾನ್ಯ ಸಚಿವರು ಹೇಳಿದರು ಹೇಳಿದ್ದರಲ್ಲಿ ಒಂದೂ ಕೂಡ ನಿಜ ಇಲ್ಲ.....

(ಗೊಂದಲ)

ಶ್ರೀ ಎಂ. ನಾರಾಯಣ ಸ್ವಾಮಿ:– ಉಪಾಧ್ಯಕ್ಷಿಣಿಯವರೇ, ನನ್ನ ಅಭಿಪ್ರಾಯದಲ್ಲಿ ಹೇಳುವುದೆಂದರೆ ಈ ಇಲಾಖೆಯನ್ನು ಸರಿಪಡಿಸದ ಹೊರತು, ಅಲ್ಲಿ ಕೆಲಸ ಮಾಡತಕ್ಕಂಥ ಅಧಿಕಾರಿಗಳ ವರ್ಗಾವಣೆ ಮಾಡದ ಹೊರತು ಏನೂ ಪ್ರಯೋಜನವಾಗಲಾರದು. ಕೇವಲ ಸುಳ್ಳು ಅಂಕಿ ಅಂಶಗಳನ್ನು ಸರ್ಕಾರಕ್ಕೆ ಸದನಕ್ಕೆ ಕೊಡತಕ್ಕ ಕೆಲಸ ಮಾಡುತ್ತಿದ್ದಾರೆ.

(ಗೊಂದಲ)

ಉಪಾಧ್ಯಕ್ಷಿಣಿಯವರು:– ಈ ರೀತಿಯಾದರೆ 10 ಪ್ರಶ್ನೆಗಳು ಲ್ಯಾಪ್ಸ್ ಆಗುತ್ತವೆ. ಇನ್ನು 15 ನಿಮಿಷ ಇದೆ.

ಶ್ರೀ ಎಂ. ನಾರಾಯಣ ಸ್ವಾಮಿ:– ಇಷ್ಟೊಂದು ದೊಡ್ಡ ಅನಾಹುತ ರಾಜ್ಯದಲ್ಲಿ ಆಗಿದ್ದರೂ ಇಲಾಖಾ ಮುಖ್ಯಸ್ಥರು ಯಾವುದೇ ಸ್ಥಳಕ್ಕೆ ಹೋಗಿಲ್ಲ, ಯಾರ ಮೇಲೂ ಕ್ರಮ ತೆಗೆದುಕೊಂಡಿಲ್ಲ.

ಶ್ರೀ ಎನ್. ಹುಚ್ಚ ಮಾಸ್ತಿಗೌಡ:– ಮಾನ್ಯ ಉಪಾಧ್ಯಕ್ಷಿಣಿಯವರೆ ಶ್ರೀಮಾನ್ ನಂಜುಂಡ ಸ್ವಾಮಿಯವರು ಮಾತನಾಡಿ ಪ್ರಕೃತಿಯ ಮೇಲೆ ದೂರನ್ನು ಹಾಕುತ್ತಿದ್ದಾರೆಂದು ಹೇಳಿದರು. ಇವತ್ತು ಪ್ರಕೃತಿಯ ಮೇಲೆ ಆರೋಪವನ್ನು ಹಾಕುವಂತಹ ಅವಶ್ಯಕತೆ ಇದೆ. ಏಕೆಂದರೆ ತೊಗರಿ ಆಗಲಿ, ಅವರೆ ಆಗಲಿ ಈ ಬೆಳೆಯನ್ನು ಬೆಳೆಯುವಾಗ ಮೋಡ ಕಟ್ಟಿದಾಗ ಹುಳು ಜಾಸ್ತಿಯಾಗಿ ಬೆಳೆ ಹಾಳು ಮಾಡುವುದನ್ನು ಪ್ರತಿಯೊಬ್ಬ ರೈತರೂ ನೋಡುತ್ತಿದ್ದಾರೆ. ಅದರಲ್ಲೂ ತೊಗರಿ ಬೆಳೆಯತಕ್ಕ ನಮ್ಮ ರಾಜ್ಯದ ಪ್ರದೇಶದಲ್ಲಿ .....

ಶ್ರೀ ಎಂ. ನಾರಾಯಣ ಸ್ವಾಮಿ:– ಮೋಡ ಬಂದಾಗ ಸರ್ಕಾರ ಏನು ಮುನ್ನೆಚ್ಚರಿಕೆ ಕ್ರಮ ತೆಗೆದುಕೊಂಡಿದೆ ?

(ಗೊಂದಲ)

ಶ್ರೀ ಎನ್. ಹುಚ್ಚಮಾಸ್ತಿ ಗೌಡ:– ನವೆಂಬರ್ ತಿಂಗಳಲ್ಲಿ 15, 16, 17ನೇ ತಾರೀಖಿಗೆ ಮಳೆ ಬಂದಾಗ ಮೋಡ ಕಟ್ಟಿದ್ದರಿಂದಲೇ ಹುಳು ಜಾಸ್ತಿಯಾಗಿ ಹೆಚ್ಚಿಗೆ ನಷ್ಟವಾಯಿತೆಂಬುದು ಸ್ಪಷ್ಟವಾಗಿ ಕಾಣುತ್ತದೆ. ಅದನ್ನು ರೈತರೂ ಕೂಡ ಒಪ್ಪಿಕೊಳ್ಳುತ್ತಾರೆ. ಅದಾದ ಮೇಲೆ ನಮ್ಮ ಯೂನಿವರ್ಸಿಟಿಯಲ್ಲಿ ಕೆಲಸ ಮಾಡುವವರು ನಮಗೆ ಕೆಲವಾರು ಸಲಹೆಗಳನ್ನು ಕೊಟ್ಟಿದ್ದಾರೆ. ಯಾವ ರೀತಿ ಔಷಧಿಗಳನ್ನು

ಉಪಯೋಗಿಸಬೇಕು, ಇದನ್ನು ಪರಿಶೋಧನೆ ಕೂಡ ಮಾಡಬೇಕಾದ್ದಿದೆ ಅನ್ನೋ ಅಗತ್ಯ ಇದೆ ಎಂದು ತಿಳಿದು ಸ್ಪಷ್ಟವಾಗಿ ಹೇಳಿದ್ದಾರೆ. ಅಲ್ಲಿ ಔಷಧಿಗಳನ್ನು ಮಾರಾಟ ಮಾಡುವವರ ಮೇಲೂ ಕ್ರಮ ತೆಗೆದುಕೊಳ್ಳಬೇಕೆಂದು ಈಗಾಗಲೇ 28 ಜನ ಔಷಧಿ ಮಾರಾಟಗಾರರ ಮೇಲೂ ಕ್ರಮ ತೆಗೆದುಕೊಂಡಿದ್ದೇವೆ. ಜೊತೆಗೆ ಅದು ನಮ್ಮ ರಾಜ್ಯ ಸರ್ಕಾರದ ಕೈಯಲಿಲ್ಲ ಕಾನೂನು. ಅದರ ಮೇಲೆ ಕೇಂದ್ರ ಸರ್ಕಾರಕ್ಕೆ ಬರೆದು ರಾಜ್ಯ ಸರ್ಕಾರ ಈ ಅಧಿಕಾರ ಪಡೆದು ಅದರ ಮೇಲೆ ಪರಿಶೋಧನೆ ಕೂಡ ನಡೆಸಿ ಅವರ ಕೆಲವು ಔಷಧಿಗಳನ್ನು ಉಪಯೋಗಿಸುವುದು ಅವಶ್ಯಕ ಎಂದು ಕಂಡುಬಂದಿದ್ದರಿಂದ ಅದರ ಮೇಲೆ ಪರಿಶೋಧನೆ ನಡೆಸುವುದಕ್ಕೆ ವಿಶ್ವವಿದ್ಯಾಲಯದ ಪರಿಣಿತರು ಕೂಡ ಒಪ್ಪಿಕೊಂಡು ಕೆಲಸ ಮಾಡುತ್ತಿದ್ದಾರೆ.

ಉಪಾಧ್ಯಕ್ಷರು:– ಆಯಿತು. ಈಗ ಶ್ರೀ ಡಿ.ಬಿ. ಚಂದ್ರೇಗೌಡರ ಪ್ರಶ್ನೆ ಮತ್ತು ಶ್ರೀ ಎಂ.ಎಸ್. ಆತ್ಮಾನಂದರ ಪ್ರಶ್ನೆಗಳು ಒಂದೇ ತರಹ ಇದೆ. ಇಬ್ಬರದ್ದು ತೆಗೆದುಕೊಳ್ಳೋಣ. ತಾವು ಪ್ರಶ್ನೆ ಹಾಕಿ.

ರಸಗೊಬ್ಬರದ ಬೆಲೆ ಏರಿಕೆ

445. ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ):– ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಸಗೊಬ್ಬರದ ಬೆಲೆ ಏರಿಕೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ರೈತರು ಇದರಿಂದ ಆರ್ಥಿಕವಾಗಿ ಸಂಕಷ್ಟಕ್ಕೆ ಗುರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಬಂದಿದ್ದಲ್ಲಿ, ರೈತರಿಗೆ ಪರಿಹಾರೋಪಾಯಗಳನ್ನು ಒದಗಿಸಲು ಸರ್ಕಾರ ಏನು ಕ್ರಮಗಳನ್ನು ಕೈಗೊಂಡಿದೆ ?

ಈ) ರಾಜ್ಯದಲ್ಲಿ ರಸಗೊಬ್ಬರದ ಕೊರತೆ ಹಾಗೂ ಬೆಲೆ ಏರಿಕೆಯಿಂದ ಕೃಷಿ ಉತ್ಪಾದನೆಗೆ ತೊಂದರೆಯಾಗುವುದಿಲ್ಲವೆ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ (ಕೃಷಿ ಸಚಿವರು):–

ಅ) ಹೌದು.

ಆ) ಹೌದು.

ಇ) ರಸಗೊಬ್ಬರಗಳ ಬೆಲೆ ಏರಿಕೆಯಿಂದ ರೈತನ ಮೇಲೆ ಬಿದ್ದಿರುವ ಹೊರೆಯನ್ನು ಕಡಿಮೆ ಮಾಡಲು ಒಟ್ಟು 17.53 ಕೋಟಿ ರೂಪಾಯಿಗಳ ವೆಚ್ಚದಲ್ಲಿ ರಸಗೊಬ್ಬರಗಳನ್ನು ಸಬ್ಸಿಡಿ ದರದಲ್ಲಿ ರೈತರಿಗೆ ವಿತರಣೆ ಮಾಡುವ ಯೋಜನೆಯನ್ನು ಈ ಹಿಂಗಾರಿನಲ್ಲಿ ಜಾರಿಗೊಳಿಸಲಾಗಿದೆ.

ಈ) ರಾಜ್ಯದಲ್ಲಿ ಸದ್ಯ ರಸಗೊಬ್ಬರಗಳ ಕೊರತೆ ಇರುವುದಿಲ್ಲ. ಆದರೆ ರಸಗೊಬ್ಬರಗಳ ಬೆಲೆ ಏರಿಕೆಯಿಂದಾಗಿ, ಅದರ ಬಳಕೆ ಕಡಿಮೆಯಾಗಿದೆ. ಇದರಿಂದ ಕೃಷಿ ಉತ್ಪಾದನೆ ಕುಂಠಿತಗೊಳ್ಳುವುದು.

ರಸಗೊಬ್ಬರದ ಸಹಾಯಧನ ಹಿಂತೆಗೆದುಕೊಂಡಿರುವುದು.

18. ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) - ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?